ಬೇಗೂರು ಔಟ್ ಪೊಲೀಸ್ ಠಾಣೆ ಮೇಲ್ದರ್ಜೆಗೆ ಏರಿಸುವುದು

194 (555) ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್. (ಗುಂಡ್ಲುಪೇಟೆ) ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಬೇಗೂರು ಗ್ರಾಮದ ಹೊರ ಪೊಲೀಸ್ ಠಾಣೆಯನ್ನು ಪೂರ್ಣ ಪ್ರಮಾಣದಲ್ಲಿ ಪೊಲೀಸ್ ಠಾಣೆಯಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವ ಕಳೆದ 5 ವರ್ಷಗಳಿಂದ ಸರ್ಕಾರದ ಹಂತದಲ್ಲಿ ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಪ್ರಸ್ತಾವದಂತೆ ಬೇಗೂರು ಪೊಲೀಸ್ ಹೊರಠಾಣೆಯನ್ನು ಇಲ್ಲಿಯವರೆಗೆ ಮೇಲ್ದರ್ಜೆಗೇರಿಸಲು ಅನುಮೋದನೆ ನೀಡದಿರಲು ಕಾರಣವೇನು;

ಇ) ತ್ವರಿತವಾಗಿ ಸದರಿ ಪೊಲೀಸ್ ಹೊರ ಠಾಣೆಯನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಶ್ರೀ ಆರ್. ಅಶೋಕ (ಗೃಹ ಮತ್ತು ಸಾರಿಗೆ ಸಚಿವರು):

ಅ) ಹೌದು.

ಆ) 1. ಸರ್ಕಾರಿ ಆದೇಶ ಸಂಖ್ಯೆ. ಹೆಚ್‌ಡಿ 207 ಪಿಓಪಿ 2008 ದಿನಾಂಕ: 10/02/2010ರಲ್ಲಿ 2010–11ನೇ ಸಾಲಿನಲ್ಲಿ ಹೊಸ 7 ಪೊಲೀಸ್ ಠಾಣೆಗಳು, 8 ಸಂಚಾರಿ ಠಾಣೆಗಳು ಹಾಗೂ 10 ಪೊಲೀಸ್ ಉಪ ಠಾಣೆಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ. ಈ ಒಟ್ಟು 25 ಪೊಲೀಸ್ ಠಾಣೆಗಳಿಗೆ ತಗಲುವ ಆವರ್ತಕ ವೆಚ್ಚವು ರೂ. 16,49,49,128/– ಆಗಿರುತ್ತದೆ. ಮುಂದುವರೆದು, ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಡಿ 331 ಪಿಓಪಿ 2009, ದಿನಾಂಕ: 11/02/2010ರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ ಪೊಲೀಸ್ ಉಪವಿಭಾಗವನ್ನು ಸಹ ತೆರೆಯಲಾಗಿದೆ. ಇದಕ್ಕಾಗಿ ತಗಲುವ ಆವರ್ತಕ ವೆಚ್ಚವು ರೂ. 13,03,956/– ಆಗಿರುತ್ತದೆ. ಈ ಪೊಲೀಸ್ ಠಾಣೆಗಳನ್ನು 2010–11ನೇ ಸಾಲಿನಿಂದ ಕಾರ್ಯಗತಗೊಳಿಸಲು ಮಂಜೂರಾತಿ ನೀಡಿದ್ದು, 25 ಪೊಲೀಸ್ ಠಾಣೆಗಳ ಮತ್ತು ಉಪವಿಭಾಗದ ಒಟ್ಟು ಆವರ್ತಕ ವೆಚ್ಚವು ರೂ. 16,62,53,084/–ಗಳಾಗುತ್ತವೆ. 2010–2011ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ "2055–00–800–0–01 ಹೊಸ ಆರಕ್ಷಕ ಠಾಣೆಗಳನ್ನು ತೆರೆಯುವುದು" ಇದರಡಿಯಲ್ಲಿ ರೂ. 406.69 ಲಕ್ಷಗಳ

ಅನುದಾನವನ್ನು ಕಲ್ಪಿಸಲಾಗಿದೆ. 2010–11ನೇ ಸಾಲಿನಲ್ಲಿ ಮಂಜೂರಾತಿ ನೀಡಿದ ಪೊಲೀಸ್ ಠಾಣೆಗಳ ಆವರ್ತಕ ವೆಚ್ಚವನ್ನು ಭರಿಸಲು ಸದರಿ ಸಾಲಿನಲ್ಲಿ ಕಲ್ಪಿಸಿರುವ ಅನುದಾನವು ಕಡಿಮೆ ಆಗಿರುತ್ತದೆ.

2. ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಈಗಾಗಲೇ ಮಂಜೂರಾತಿ ನೀಡಿದ 25 ಪೊಲೀಸ್ ಠಾಣೆಗಳು ಮತ್ತು ಒಂದು ಉಪ ವಿಭಾಗವು ಪೂರ್ಣವಾಗಿ ಕಾರ್ಯಾರಂಭಗೊಳ್ಳಲು ಕೊರತೆ ಬೀಳುವ ಅನುದಾನವನ್ನು ಸರಿದೂಗಿಸಿ ಅವುಗಳು ಕಾರ್ಯಾರಂಭ ಮಾಡಿದ ನಂತರ ಬೇಗೂರು ಪೊಲೀಸ್ ಹೊರಠಾಣೆಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಹಣಕಾಸಿನ ಲಭ್ಯತೆಯ ಆಧಾರದ ಮೇಲೆ ಮಂಜೂರು ಮಾಡಲು ಪರಿಶೀಲಿಸಲಾಗುವುದು.

ಇ) ಮೇಲಿನ "ಅ" ಪ್ರಶ್ನೆಗೆ ಕ್ರಮ ಸಂಖ್ಯೆ: (2)ರಲ್ಲಿ ನೀಡಿರುವ ಉತ್ತರ ಈ ಪ್ರಶ್ನೆಗೂ ಅನ್ವಯಿಸುತ್ತದೆ.

ಅನುದಾನ ನೀಡಿಕೆ

195 (595) ಶ್ರೀ ಮಹದೇವ ಪ್ರಸಾದ ಹೆಚ್.ಎಸ್. (ಗುಂಡ್ಲುಪೇಟೆ) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ 2010–11ನೇ ಸಾಲಿನಲ್ಲಿ ಎಷ್ಟು ಹಣವನ್ನು ಮಂಜೂರು ಮಾಡಲು ಅಂದಾಜಿಸಲಾಗಿತ್ತು. ಈ ಪೈಕಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ಹಾಗೂ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ;

ಆ) ಈ ವರ್ಷ ಕೇಂದ್ರ ಸರ್ಕಾರದಿಂದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಬಿಡುಗಡೆ ಮಾಡಿದ ಹಣವೆಷ್ಟು ಯಾವ ಯೋಜನೆಗಳಿಗಾಗಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ;

ಇ) ಈ ಇಲಾಖೆಯ ಯಾವ ಯಾವ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಗಳಿಗೆ ಈ ವರ್ಷ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ?